**ಓ .ಎಸ್ . ನಂ.215/2015** **ಪಿಡಬ್ಲ್ಯೂ: 2**

**ದಿನಾಂಕ 04.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಶ್ರೀ ಎನ್.ಆರ್.ಕೆ. ಪ್ರತಿವಾದಿ ಪರ ವಕೀಲರಿಂದಃ**

ನಾನು 7ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯು ಪಂಚಾಯ್ತಿ ದಾಖಲೆಗಳ ಆಧಾರದ ಮೇಲೆ ದಾವೆ ಸಲ್ಲಿಸಿರುತ್ತಾರೆ. ನಾನು ದಾವಾಸ್ತಿಗೆ ಸಂಬಂಧಪಟ್ಟಂತೆ ಡಿಮ್ಯಾಂಡ್ ರೆಜಿಸ್ಟರ್ ನ್ನು ಮಾತ್ರ ನೋಡಿರುತ್ತೇನೆ. ಈ ದಾವೆಯಲ್ಲಿ ವಾದಿಗಳು ಎಷ್ಟು ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಸಲ್ಲಿಸಿರುವ ಆಸ್ತಿಗಳ ವಿವರ ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯಲ್ಲಿ ಯಾವೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ವಕೀಲರಿಗೆ ಹೇಳಿ ಬರೆಯಿಸಿರುವುದಿಲ್ಲ ಎಂದರೆ ಸರಿ .

ನನಗೆ ಸಿದ್ಧಶೆಟ್ಟರವರ ಮಗ ವೀರಶೆಟ್ಟಿ ಗೊತ್ತಿರುತ್ತಾರೆ. ಈ ದಾವೆಯನ್ನು ಮಹದೇವಶೆಟ್ಟರವರು ಸಲ್ಲಿಸಿರುತ್ತಾರೆ. 1ನೇ ವಾದಿಯ ತಾತನವರ ಹೆಸರು ವೀರಶೆಟ್ಟಿ ವೀರಶೆಟ್ಟರವರು ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ವೀರಶೆಟ್ಟರವರಿಗೆ ಇಬ್ಬರು ಗಂಡು ಹಾಗೂ ಒಂದು ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳು ಮಹದೇವಶೆಟ್ಟಿ ಜವನಮ್ಮ ಇನ್ನೊಬ್ಬರು ಮರಣ ಹೊಂದಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಒಂದೇ ಜನಾಂಗದವರು ಎಂದರೆ ಸರಿ . ನಮ್ಮ ಮನೆ ಸರ್ಕಾರಿ ಶಾಲೆಯ ಮುಖ್ಯ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿ . ವಾದಿಗಳು ಮಧುವನಹಳ್ಳಿ ಗ್ರಾಮದ ಹೊಂಡರಬಾಳು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ವಾಸವಿರುತ್ತಾರೆಂದರೆ ಸಾಕ್ಷಿಯು ಮಧುವನಹಳ್ಳಿ ಗ್ರಾಮದ ನಂಜುಂಡಸ್ವಾಮಿ ನಗರದಲ್ಲಿ ವಾಸವಿರುತ್ತಾರೆ. ದಾವಾಸ್ತಿಯು ಮೇದಾರ ಬೀದಿಯಲ್ಲಿ ಇರುತ್ತದೆ. ನಾನು ದಾವಾಸ್ತಿಯ ಪಂಚಾಯ್ತಿ ದಾಖಲೆಗಳನ್ನು ನೋಡಿರುವುದಿಲ್ಲ. ನಾನು ಮಧುವನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ 15 ವರ್ಷ ದಿಂದ ಕೆಲಸ ಮಾಡುತ್ತಿದ್ದೇನೆ. ನಂಜಂಡಸ್ವಾಮಿ ನಗರಕ್ಕೂ ಮೇದಾರ ಬೀದಿಗೂ 1ರಿಂದ 2 ಕಿ.ಮೀ ಅಂತರ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 200 ರಿಂದ 300 ಮೀಟರ್ ಅಂತರ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾಸ್ತಿಯ ಖಾತೆಯು ವೀರಶೆಟ್ಟಿ ಅವರ ಮಗ ಸಿದ್ಧಶೆಟಿಟ ಹಾಗೂ 1ನೇ ವಾದಿಯ ಹೆಸರಿನಲ್ಲಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಯ ಜಂಜರ್ ನಂಬರ್ ನನಗೆ ಗೊತ್ತಿಲ್ಲ. ಸದರಿರವರುಗಳು ಯಾವ ವರ್ಷ ಖಾತೆ ಮಾಡಿಸಿಕೊಂಡಿರುತ್ತಾರೆಂದು ಗೊತ್ತಿಲ್ಲ. ಸದರಿ ಯವರು ಖಾತೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಯಾವ ದಾಖಲೆಗಳನ್ನು ನೀಡಿರುತ್ತಾರೆಂದು ನಾನು ನೀಡಿರುತ್ತೇನೆ. ಸದರಿರವರು ಖಾತೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಮೂಲ ಪತ್ರ ನೀಡಿರುತ್ತಾರೆ. ಸದರಿ ಪತ್ರ ಯಾವ ಪತ್ರವೆಂದು ನನಗೆ ಗೊತ್ತಿಲ್ಲ. 1ನೇ ವಾದಿಯ ಹೆಸರಿಗೆ ಖಾತೆ ದಾಖಲಾಗುವ ಪೂರ್ವದಲ್ಲಿ ದಾವಾಸ್ತಿಯ ಖಾತೆಯು ಅವರ ತಾತ ವೀರಶೆಟ್ಟರವರ ಹೆಸರಿನಲ್ಲಿ ದಾಖಲಾಗಿತ್ತು. 1ನೇ ವಾದಿಯ ತಾತ ವೀರಶೆಟ್ಟರವರ ಹೆಸರಿಗೆ ಯಾವ ವರ್ಷ ಖಾತೆ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿಯು ಯಾವ ಆಸ್ತಿಯನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಸಂಖ್ಯೆ , ಚೆಕ್ಕುಬಂಧಿ ನನಗೆ ನೆನಪಿಲ್ಲ. ವೀರಶೆಟ್ಟ ರವರಿಗೆ ಮನೆ ಮತ್ತು ಜಮೀನು ಇತ್ತು. ಜಮೀನಿನ ವಿಚಾರವನ್ನು ನನ್ನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ . ವೀರಶೆಟ್ಟರವರು ತಮ್ಮ ಆಸ್ತಿಗಳನ್ನು ಯಾವ ರೀತಿ ಅನುಭವಿಸುತ್ತಿದ್ದರು ಎಂದು ನನಗೆ ವಾದಿಗಳು ಹೇಳಿರುವುದಿಲ್ಲ. ವೀರಶೆಟ್ಟರವರ ಮರಣದ ನಂತರ ಅವರ ಮಕ್ಕಳು ತಮ್ಮ ಆಸ್ತಿಗಳನ್ನು ಯಾವ ರೀತಿ ಅನುಭವಿಸುತ್ತಿದ್ದರು ಎಂದು ನನಗೆ ವಾದಿಗಳು ಹೇಳಿರುವುದಿಲ್ಲ.

2ನೇ ಪ್ರತಿವಾದಿಯು 1ನೇ ಪ್ರತಿವಾದಿಯಿಂದ ಆಸ್ತಿ ಖರೀದಿಸಿ 8–10 ವರ್ಷಗಳ ಹಿಂದೆ ಮನೆ ನಿರ್ಮಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿಯವರು ಮನೆಯಿಂದ ನಿರ್ಮಿಸಲು ಅನುಮತಿ ಪಡೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ವೀರಶೆಟ್ಟರವರಿಗೆ ಯಾರು ಯಾವ ವರ್ಷದಲಿಲ ಆಸ್ತಿ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸಿದ್ಧಶೆಟ್ಟ ರವರು ಮರಣ ಹೊಂದಿದಾಗ ಅವರಿಗೆ 55 –60 ವರ್ಷ ವಯಸ್ಸಾಗಿರುತ್ತದೆ. ನಾನು ಸಿದ್ಧಶೆಟ್ಟಿ ರವರ ಮರಣ ಪ್ರಮಾಣ ಪತ್ರವನ್ನು ನೋಡಿರುವುದಿಲ್ಲ. ಸಿದ್ದಶೆಟ್ಟರವರು 4 –5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಾನು ಕೊಳ್ಳೇಗಾಲ ನ್ಯಾಯಾಲಯಗಳಲ್ಲಿ ಅನೇಕ ಬಾರಿ ಜಾಮೀನು ಹಾಗೂ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ

ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇಲ್ಲದಿದ್ದರು ನನ್ನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

**ಓ ಹೇ ಕೇ ಸ ಇದೆ,**

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ